ಮೂಲ ದಾವಾ ನಂಃ 116/15 ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 22-10-2021 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ

2 ನೇ ವಾದಿ ನನ್ನ ಮಗಳು ಎಂದರೆ ಸರಿ . 2 ನೇ ವಾದಿ 10.11.2003 ರಂದು ಹುಟ್ಟಿದ್ದಾಳೆ . ಈಗ ಅವಳಿಗೆ 18 ವರ್ಷವಾಗಿದೆ ಎಂದರೆ ಸಾಕ್ಷಿ ಅವಳಿಗೆ ನವಂಬರ್ 10 ಕ್ಕೆ ಆಗುತ್ತದೆ ಎನ್ನುತ್ತಾರೆ. ನಮ್ಮ ದಾವೆ ಪ್ರಕಾರ ನಮ್ಮ ಕುಟುಂಬದ ಮೂಲಪುರುಷ ವಿಶ್ವೇಶ್ವರ ಎಂದರೆ ಸರಿ. ಸದರಿ ಮೂಲ ಪುರುಷನಿಗೆ ಕೃಷ್ಣ , ರಾಮ ಮತ್ತು ನಾರಾಯಣ ಮೂವರು ಮಕ್ಕಳು ಎಂದರೆ ಸರಿ . ಆ ಮೂವರ ಪೈಕಿ ಕೃಷ್ಣ ಮತ್ತು ನಾರಾಯಣ ತೀರಿಕೊಂಡಿದ್ದಾರೆ ಎಂದರೆ ಸರಿ . ನಾನು ನಾರಾಯಣನ ಹೆಂಡತಿ 2 ನೇ ವಾದಿ ನಾರಾಯಣನ ಮಗಳು ಎಂದರೆ ಸರಿ. ವಿಶ್ವೇಶ್ವರ ಭಟ್ ಇವರಿಗೆ 3 ಜನ ಗಂಡುಮಕ್ಕಳ ಹೊರತಾಗಿ ಶೋಭಾ ಎನ್ನುವ ಹೆಣ್ಣುಮಗಳು ಇದ್ದಾಳೆ ಎನ್ನುವುದು ನನಗೆ ಗೊತ್ತಿಲ್ಲ . ಈ ದಾವೆ ಮಾಡುವ ಪೂರ್ವದಲ್ಲಿ ನಾನು ವಿಶ್ವೇಶ್ವರ ಭಟ್ ರವರ ವಂಶವೃಕ್ಷ ವನ್ನು ಪಡೆದುಕೊಂಡಿಲ್ಲ . ವಿಶ್ವೇಶ್ವರ ಭಟ್ ರವರ ವಂಶವೃಕ್ಷ ನನಗೆ ಗೊತ್ತಿಲ್ಲ. ನಾನು ದಾಖಲಾತಿ ನೋಡಿ ದಾವೆ ಮಾಡಿದ್ದೇನೆ . ನಾನು ವಿಶ್ವೇಶ್ವರ ಭಟ್ ರವರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಕೇಳುತ್ತಿದ್ದೇನೆ ಎಂದರೆ ಸರಿ. ವಿಶ್ವೇಶ್ವರ ಭಟ್ ರವರಿಗೆ ಶೋಭಾ ಎನ್ನುವ ಹೆಣ್ಣುಮಗಳು ಇದ್ದರೂ ಕೂಡ ಅವರನ್ನು ಉದ್ದೇಶಪೂರ್ವಕವಾಗಿ ನಾನು ಅವಳಿಗೂ ಪಾಲು ಕೊಡಬೇಕಾಗುತ್ತದೆ ಎಂದು ಅವಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಮೂಲಪುರುಷ ನ ಕುಟುಂಬದ ಸದಸ್ಯರಲ್ಲಿ ಯಾವ ರೀತಿ ವಾಂಟಣಿ ಆಗಿದೆ ನನಗೆ ಗೊತ್ತಿಲ್ಲ . ಆ ವಾಂಟಣಿ ಆದ ಬಗ್ಗೆ ನಾನು ಕಾಗದ ಪತ್ರ ಹಾಜರುಪಡಿಸಿದ್ದೇನೆ.

ನಾನು ನನ್ನ ಗಂಡನ ವಿರುದ್ದ ಶಿರಸಿ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಕೋರಿ ಒಂದು ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ. ಜೀವನಾಂಶ ಕೋರಿ ಶಿರಸಿ ನ್ಯಾಯಾಲಯದಲ್ಲಿ ನನ್ನ ಗಂಡನ ವಿರುದ್ದ ಇನ್ನೊಂದು ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ . ಆ ವಿವಾಹ ವಿಚ್ಛೇದನ ಅರ್ಜಿ ಪುರಸ್ಕಾರವಾಗಿದೆ ಎಂದರೆ ಸರಿ . ಆ ವಿವಾಹ ವಿಚ್ಛೇದನ ಅರ್ಜಿಯಲ್ಲಿ ನಾನು ಶಾಶ್ವತ ಜೀವನಾಂಶದ ಹಣವನ್ನು ಹಾಗೂ ಆಸ್ತಿ ಕೊಡಿಸುವ ಬಗ್ಗೆ ಪರಿಹಾರ ಕೇಳಿಲ್ಲ ಎಂದರೆ ಸರಿ. . ಆ ಅರ್ಜಿಯಲ್ಲಿ ನನಗೆ ಅಂತಹ ಪರಿಹಾರ ಕೇಳಲು ತೊಂದರೆ ಇರಲಿಲ್ಲ. ಜೀವನಾಂಶ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಮಧ್ಯಂತರ ಆದೇಶವಾಗಿರಲಿಲ್ಲ . ವಿವಾಹ ವಿಚ್ಛೇದನ ದ ಆದೇಶ ಹಾಗೂ ಜೀವನಾಂಶ ಕೋರಿ ಸಲ್ಲಿಸಿದ ಅರ್ಜಿಯ ಆದೇಶದ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ . ವಿವಾಹ ವಿಚ್ಛೇದನ ಆದುದರಿಂದ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಮಗಳಿಗೆ ಹಕ್ಕು ಇರುತ್ತದೆ ಎನ್ನುತ್ತಾರೆ . ವಿವಾಹ ವಿಚ್ಛೇದನ ದ ಅರ್ಜಿಯ ಪ್ರಕರಣದಲ್ಲಿ ನಮ್ಮ ಮಗಳು ಯಾರ ಸುಪರ್ದಿಗೆ ಇರಬೇಕೆಂಬ ಬಗ್ಗೆ ಯಾವುದೇ ಆದೇಶ ಪಡೆದಿಲ್ಲ.

ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ/–

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.